■ ವಿಶಾಖ ಎನ್.



'ಧುರಂಧರ್' ಚಿತ್ರದಲ್ಲಿ ರಣವೀರ್ ಸಿಂಗ್

2025 ಸರಿಯುವ ಮುನ್ನ...

# ಆರಂಭ-ಅಂತ್ಯದ ಸವಿಬೆಲ್ಲ

ಹಿಂದಿ ಚಿತ್ರರಂಗವು ಕಳೆದ ವರ್ಷ ಕವಲುದಾರಿಯಲ್ಲಿತ್ತು. ಈ ವರ್ಷ ಅದಕ್ಕೆ ಜೀವಾನಿಲವಾಗಿ ಒದಗಿಬಂದದ್ದು 'ಸೀಕ್ವೆಲ್' ಚಿತ್ರಗಳು ಅರ್ಥಾತ್ ಹಳೆಯ ಶೀರ್ಷಿಕೆಯ ಮುಂದುವರಿದ ಭಾಗಗಳು. ವಹಿವಾಟಿನ ದೃಷ್ಟಿಯಲ್ಲಿ ಈ ಮಾತು ಸತ್ಯವಾದರೂ, ಗೆದ್ದ ಸ್ವತಂತ್ರ ಪ್ರಯೋಗಗಳಿಗೆ ಉದಾಹರಣೆಗಳೂ ಇಲ್ಲದೇ ಇಲ್ಲ.

ಸುಮಾರು 230 ಹಿಂದಿ ಸಿನಿಮಾಗಳು ಡಿಸೆಂಬರ್ ಎರಡನೇ ವಾರ ಕಳೆಯುವ ಹೊತ್ತಿಗೆ ತೆರೆಕಂಡಿದ್ದವು. ವಹಿವಾಟಿನ ಪಟ್ಟಿ ನೋಡಿದರೆ ಮೊದಲ ಸ್ಥಾನ 'ಛಾವಾ'ಕ್ಕೆ ಸಂದಿದೆ. ₹800 ಕೋಟಿಗೂ ಹೆಚ್ಚು ಬಾಚಿದೆ. ಲಕ್ಷ್ಮಣ್ ಉತೇಕರ್ ನಿರ್ದೇಶಿಸಿ, ಸಂಭಾಜಿ ಪಾತ್ರದಲ್ಲಿ ವಿಕ್ಕಿ ಕೌಶಲ್ ನಟಿಸಿದ ಐತಿಹಾಸಿಕ ಚಿತ್ರವಿದು. 'ಧುರಂಧರ್' ಗಳಿಕೆಯಲ್ಲಿ ಆ ಸಿನಿಮಾವನ್ನು ಹಿಂದಿಕ್ಕುವ ಸಾಧ್ಯತೆ ನಿಚ್ಚಳವಾಗಿದೆ. ಯಾಕೆಂದರೆ, ತೆರೆಕಂಡ ಎರಡೇ ವಾರಗಳಲ್ಲಿ ಅದರ ಬಾಕ್ಸಾಫೀಸ್ ಗಳಿಕೆಯು ₹625 ಕೋಟಿ ದಾಟಿದೆ. ಆದಿತ್ಯ ಧರ್ ನಿರ್ಮಾಣದಲ್ಲೂ ಕೈಹಚ್ಚಿ, ನಿರ್ದೇಶಿಸಿರುವ ಈ ಸಿನಿಮಾ ನಾಯಕ ರಣವೀರ್ ಸಿಂಗ್. ಬಾಕ್ಸಾಫೀಸ್‌ನಲ್ಲಿ ಮುಂಚೂಣಿಯಲ್ಲಿರುವ ಈ ಎರಡೂ ಸಿನಿಮಾಗಳ ಅಭಿನಯದಿಂದ ಅಕ್ಷಯ್ ಖನ್ನಾ ಗಮನಸೆಳೆದದ್ದಕ್ಕೆ ಅಡಿಗೆರೆ ಎಳೆಯಬೇಕು.



ವಾರ್ 2

ಸೀಕ್ವೆಲ್‌ಗಳ ಹಂಗಿನ ಕಡೆಗೆ ನೋಡೋಣ. ಅಯಾನ್ ಮುಖರ್ಜಿ ನಿರ್ದೇಶನದ 'ವಾರ್ 2' ಚಿತ್ರಕ್ಕೆ ಜೂನಿಯರ್ ಎನ್‌ಟಿಆರ್ ಹಾಗೂ ಹೃತಿಕ್ ರೋಶನ್ ಅಪರೂಪದ ತಾರಾ ವರ್ಚಸ್ಸು ಇತ್ತು. ಆದರೆ, ಕಳಪೆ ಕಂಪ್ಯೂಟರ್ ಗ್ರಾಫಿಕ್ಸ್ ಹಾಗೂ ಸಡಿಲವಾದ ಚಿತ್ರಕಥೆಯ ಕಾರಣದಿಂದಾಗಿ ಹಾಕಿದ ಮುನ್ನೂರು ಕೋಟಿ ಬಂಡವಾಳಕ್ಕೆ ಒಂದಿಷ್ಟು ಕೊಸರು ಎಂಬಂತೆ ಲಾಭ ಬಂದಿತಷ್ಟೆ. ಸುಭಾಷ್ ಕಪೂರ್ ಆ್ಯಕ್ಷನ್–ಕಟ್ ಹೇಳಿದ್ದ 'ಜಾಲಿ ಎಲ್‌ಎಲ್‌ಬಿ3' ಚಿತ್ರ ₹120 ಕೋಟಿ ಬಜೆಟ್‌ನಲ್ಲಿ ತಯಾರಾಗಿ 50 ಕೋಟಿ ರೂಪಾಯಿಯಷ್ಟು ಲಾಭ ತಂದುಕೊಟ್ಟಿತು. 'ಹೌಸ್‌ಫುಲ್ 5' ಇದ್ದುದರಲ್ಲಿ ಪರವಾಗಿಲ್ಲ ಎನಿಸಿಕೊಂಡಿತು. 'ರೇಡ್2' ಯಶಸ್ವಿಯಾದದ್ದು ಅದರ ಚಿತ್ರಕಥೆಯಿಂದ. 'ಬಾಗಿ 4', 'ಕೇಸರಿ ಚಾಪ್ಟರ್ 2', 'ಮಸ್ತಿ 4' ಇವೆಲ್ಲ ಸರಣಿ ಚಿತ್ರಗಳಿಗೆ ಇದು ಕಾಲವಲ್ಲ ಎನ್ನುವುದಕ್ಕೆ ಉದಾಹರಣೆಗಳಾಗಿಬಿಟ್ಟವು.

'ಸಿತಾರೆ ಜಮೀನ್ ಪರ್' ಈ ವರ್ಷ ಜನಪ್ರಿಯ ಸಿನಿಮಾಗಳಲ್ಲೇ ಪ್ರಚಾರದ ಮಾದರಿಯೊಂದನ್ನು ಸೃಷ್ಟಿಸಿತು. ಕಡಿಮೆ ಬಜೆಟ್‌ನಲ್ಲಿ ಈ ಚಿತ್ರ ತಯಾರಿಸಿದ ಅಮೀರ್ ಖಾನ್, ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದರು. ಬೇರೆ ಒಟಿಟಿಗೆ ಹಕ್ಕು ನೀಡಲಿಲ್ಲ. ಚಿತ್ರಮಂದಿರಗಳ ಗಳಿಕೆಗೂ ಮೀರಿ ಯೂಟ್ಯೂಬ್‌ನಲ್ಲಿ ₹100 ಕೊಟ್ಟು ಜನರು ಈ ಸಿನಿಮಾ ನೋಡಿದರು. ಇಡೀ ವರ್ಷದಲ್ಲಿ ಅತಿ ಹೆಚ್ಚು ವಹಿವಾಟು ಮಾಡಿದ ಚಿತ್ರಗಳ ಪಟ್ಟಿಯಲ್ಲಿ ಇದು ಆರನೇ ಸ್ಥಾನದಲ್ಲಿದೆ.

ಅಹಾನ್ ಪಾಂಡೆ, ಅನೀತ್ ಪಡ್ಡಾ ಎಂಬ ಹೊಸ ಮುಖಗಳನ್ನು ಇಟ್ಟುಕೊಂಡು ನಿರ್ದೇಶಕ ಮೋಹಿತ್ ಸೂರಿ ನಿರ್ದೇಶಿಸಿದ 'ಸೈಯಾರಾ' ₹45 ಕೋಟಿಯಲ್ಲಿ ತಯಾರಾದ ಸಿನಿಮಾ. ಅದು ₹570 ಕೋಟಿಗೂ ಹೆಚ್ಚು ವಹಿವಾಟು ನಡೆಸಿದ್ದು ಹೊಸ ತಲೆಮಾರಿನ ಯುವಕ–ಯುವತಿಯರು ಚಿತ್ರವನ್ನು ಮೆಚ್ಚಿಕೊಂಡಿದ್ದಕ್ಕೆ ಸಾಕ್ಷಿ. ವಿಶಾಲ್ ಮಿಶ್ರಾ, ತಾನಿಷ್ ಬಾಗ್ಚಿ, ಮಿಥುನ್, ಫಾಹೀಮ್ ಅಬ್ದುಲ್ಲಾ ತರಹದ ಸಂಗೀತಗಾರರ ಕಾಣ್ಕೆಯೂ ಮುಖ್ಯ.

ಸಲ್ಮಾನ್ ಖಾನ್ ಅಭಿನಯದ 'ಸಿಕಂದರ್' ಚಿತ್ರವು ₹200 ಕೋಟಿ ಆದಾಯದ ಗಡಿಯನ್ನೂ ದಾಟಲು ಸಾಧ್ಯವಾಗಲಿಲ್ಲ. ಆದರೆ, ರಶ್ಮಿಕಾ ಮಂದಣ್ಣ ನಾಯಕಿಯಾಗಿದ್ದ, ಆಯುಷ್ಮಾನ್ ಖುರಾನಾ ಉತ್ತಮ ಮರುಪ್ರವೇಶ ಮಾಡಿದ ಸಿನಿಮಾ ಎಂದೇ ವಿಶ್ಲೇಷಿಸಲಾದ 'ತಮ್ಮ' ಹಾರರ್–ಕಾಮಿಡಿ ಸುಮಾರು ₹170 ಕೋಟಿ ಗಳಿಕೆ ಮಾಡಿದ್ದು ವಿಶೇಷ. 'ಮಹಾವತಾರ ನರಸಿಂಹ' ಅನಿಮೇಟೆಡ್ ಚಿತ್ರವು ಹಲವು ಭಾಷೆಗಳಿಗೆ ಡಬ್ ಆಗಿ ತೆರೆಕಂಡಿತು. ಹಿಂದಿ ಅವತರಣಿಕೆಯಲ್ಲೂ ಅದರ ಗಳಿಕೆ ಎಷ್ಟೋ ಸ್ಟಾರ್‌ಗಳ ಚಿತ್ರಗಳನ್ನು ಹಿಂದಿಕ್ಕಿದ್ದನ್ನು ದಕ್ಷಿಣ ಭಾರತದ ಅಭಿಮಾನಿಗಳು ಸಂಭ್ರಮಿಸಿದರು.



ಛಾವಾ ಚಿತ್ರದಲ್ಲಿ ವಿಕ್ಕಿ ಕೌಶಲ್

ಮನೋಜ್ ಕುಮಾರ್, ಧರ್ಮೇಂದ್ರ ಗೋವರ್ಧನ್ ಅಸರಾನಿ, ಸತೀಶ್ ಶಾ, ಸುಲಕ್ಷಣಾ ಪಂಡಿತ್ ಅವರಂತಹ ನಟ–ನಟಿಯರು ಅಗಲಿದ ವರ್ಷವಿದು. ನಿರ್ಮಾಪಕ ಪ್ರೀತೀಶ್ ನಂದಿ ನಿಧನರಾದದ್ದೂ ಇದೇ ವರ್ಷ. ಸಿಂಗಪುರದಲ್ಲಿ ಸಂಶಯಾಸ್ಪದ ರೀತಿಯಲ್ಲಿ ಗಾಯಕ ಜುಬಿನ್ ಗರ್ಗ್ ಸಾವಿಗೀಡಾದ ನಂತರ ಅಸ್ಸಾಮಿನಲ್ಲಿ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದರು.

ಕಳ್ಳನೊಬ್ಬ ಚೂರಿ ಇರಿತ ಮಾಡಿದ್ದರಿಂದ ಗಂಭೀರವಾಗಿ ಗಾಯಗೊಂಡು, ನಿಜ ಬದುಕಿನಲ್ಲೂ ನಟ ಸೈಫ್ ಅಲಿ ಖಾನ್ ಹೀರೋಗಿರಿ ತೋರಿದ್ದು, ಹತ್ಯೆ ಸಂಚಿನ ನೆರಳಿನಲ್ಲೇ ಸೂಪರ್ ಸ್ಟಾರ್ ಸಲ್ಮಾನ್ ಖಾನ್ ಏಗಬೇಕಾಗಿ ಬಂದ ವರ್ಷ ಇದಾಗಿತ್ತು. 'ಎಮರ್ಜೆನ್ಸಿ' ಹೆಸರಿನ ರಾಜಕೀಯ ಸಿನಿಮಾ ಮಾಡಿ, ಪ್ರಜ್ಞಾಪೂರ್ವಕವಾಗಿ ನಟಿ ಕಂಗನಾ ರನೋತ್ ವಿವಾದ ಸೃಷ್ಟಿಸಿದರಾದರೂ ಸಿನಿಮಾ ಗೆಲ್ಲಲಿಲ್ಲ.

'ಸೈಯಾರಾ' ಚಿತ್ರದಲ್ಲಿ ಅಹಾನ್ ಹಾಗೂ ಅನೀತ್



ನೀರಜ್ ಘೆವಾನ್ ನಿರ್ದೇಶನದ 'ಹೋಮ್‌ಬೌಂಡ್' ಚಿತ್ರ ಆಸ್ಕರ್ ಅಂಗಳ ತಲುಪಿದ್ದು, ದಕ್ಷಿಣದ ನಟ ಧನುಷ್‌ಗೆ 'ತೇರೆ ಇಷ್ಕ್ ಮೇ' ಚಿತ್ರವು ದೊಡ್ಡ ಯಶಸ್ಸನ್ನು ಕೊಟ್ಟಿದ್ದು, ಅನುರಾಗ್ ಕಶ್ಯಪ್ ಬಿಗುವಾದ ದಿಗ್ದರ್ಶನಕ್ಕೆ ಉದಾಹರಣೆಯಾಗಿ 'ನಿಶಾನ್ಚಿ' ಸಿನಿಮಾ ಬಂದದ್ದು ವರ್ಷದ ಮೆಲುಕ ಹಾಕಬಹುದಾದ ಸಂಗತಿಗಳಲ್ಲಿ ಮುಖ್ಯವಾದವು. ■